ನಿಮ್ಮೊಡನೆ

# ರಸ್ತೆಗಳಲ್ಲಿ ಹದಿಹರೆಯದವರ ‘ವ್ಹೀಲಿ’ ಕಸರತ್ತು ಬೇಕಿದೆ ಕಡಿವಾಣ, ಮೂಡಿಸಬೇಕಿದೆ ವಿವೇಕ

ವ್ಹೀಲಿ ಹುಚ್ಚನ್ನು ನಿಯಂತ್ರಿಸುವಲ್ಲಿ ಪೋಷಕರ ಪಾತ್ರವೂ ಮುಖ್ಯವಾದುದಾಗಿದೆ. ಅಗತ್ಯವಿಲ್ಲದೆಯೂ ಮಕ್ಕಳಿಗೆ ದ್ವಿಚಕ್ರ ವಾಹನಗಳನ್ನು ಕೊಡಿಸುವ ಪೋಷಕರ ಸಂಖ್ಯೆ ದೊಡ್ಡದಿದೆ. ತೀರಾ ಅಗತ್ಯವೆನಿಸದೆ ಹೋದರೆ ದ್ವಿಚಕ್ರ ವಾಹನಗಳನ್ನು ಮಕ್ಕಳಿಗೆ ಕೊಡಿಸುವುದು ಸಂಪನ್ಮೂಲಗಳ ಅಪವ್ಯಯವಷ್ಟೇ.



ಈಶ್ವರ್

ರಸ್ತೆಯಲ್ಲಿ ಸಂಚರಿಸುವಾಗ ಪುಂಡು ದನಗಳೋ ಹುಚ್ಚು ನಾಯಿಯೋ ಇದ್ದಕ್ಕಿದ್ದಂತೆ ಎದುರಾಗುವುದಿದೆ. ಈ ಪುಂಡು ದನ, ಹುಚ್ಚು ನಾಯಿಗಳ ಸಾಲಿನಲ್ಲೀಗ ದ್ವಿಚಕ್ರ ವಾಹನಗಳಲ್ಲಿ ಕಸರತ್ತು ಮಾಡುವ ಪುಂಡರನ್ನೂ ಸೇರಿಸಿಕೊಳ್ಳಬೇಕಾಗಿದೆ. ವಾಹನಗಳಿಂದ ಕರ್ಕಶ ಶಬ್ದ ಹೊರಡಿಸುವುದರ ಜೊತೆಗೆ, ದ್ವಿಚಕ್ರ ವಾಹನವನ್ನು ಒಂಟಿ ಚಕ್ರದಲ್ಲಿ ಓಡಿಸುವ ಮೂಲಕ ಹುಡುಗರು ಮಾಡುವ ಕಸರತ್ತು ಭಯ ಹುಟ್ಟಿಸುವಂತಿರುತ್ತದೆ. ‘ವ್ಹೀಲಿ’ ಹೆಸರಿನಿಂದ ಕರೆಸಿಕೊಳ್ಳುವ ಈ ಕಸರತ್ತು ಸ್ವತಃ ವಾಹನ ಸವಾರರಿಗೆ ಅಪಾಯಕಾರಿ ಮಾತ್ರವಲ್ಲದೆ, ಇತರೆ ವಾಹನ ಸವಾರರಿಗೂ ಪಾದಚಾರಿಗಳಿಗೂ ಜೀವಭಯ ಉಂಟುಮಾಡುವಂತಿರುತ್ತದೆ.

ವ್ಹೀಲಿ ಕಾರಣದಿಂದಾಗಿ ಜೀವಹಾನಿ ಸಂಭವಿಸಿದ ಉದಾಹರಣೆಗಳೂ ಇವೆ. ವ್ಹೀಲಿ ಮಾಡುತ್ತಲೇ ಅತಿ ವೇಗದಲ್ಲಿ ಬೈಕ್ ಓಡಿಸಿದ ಬೆಂಗಳೂರಿನ ಯುವಕನೊಬ್ಬ ಬಿಬಿಎಂಪಿ ಹಾಗೂ ಜಲಮಂಡಲಿ ಕೃಪಾಪೋಷಿತ ಗುಂಡಿಯೊಂದರಲ್ಲಿ ಬಿದ್ದು ಸಾವನ್ನಪ್ಪಿದ್ದ. ದೇವನಹಳ್ಳಿಯ ಬೈಪಾಸ್ ರಸ್ತೆಯಲ್ಲಿ ವ್ಹೀಲಿ ಮಾಡುತ್ತಿದ್ದ ಯುವಕರಿಬ್ಬರು ಕ್ಯಾಂಟರ್‌ಗೆ ಡಿಕ್ಕಿ ಹೊಡೆದು ಮೃತಪಟ್ಟಿದ್ದರು ಹಾಗೂ ಇಬ್ಬರು ಹುಡುಗರ ವ್ಹೀಲಿ ಹುಚ್ಚಾಟಕ್ಕೆ ಪೂಜಾರಿಯೊಬ್ಬರು ಬಂಗಾರಪೇಟೆಯಲ್ಲಿ ಬಲಿಯಾಗಿದ್ದರು. ಇವು, 2024ರಲ್ಲಿ ವ್ಹೀಲಿ ಹುಚ್ಚಿನಿಂದ ಸಂಭವಿಸಿದ ಕೆಲವು ದುರಂತಗಳಷ್ಟೇ.

ಬೈಕ್‌ಗಳಲ್ಲಿ ಮಾತ್ರವಲ್ಲದೆ, ಸೈಕಲ್‌ಗಳಲ್ಲಿ ವ್ಹೀಲಿ ಮಾಡುವ ಹುಡುಗರೂ ಇದ್ದಾರೆ. ಆಟೊದಲ್ಲಿ ವ್ಹೀಲಿ ಮಾಡಿದವರ ವಿರುದ್ಧ ಪ್ರಕರಣಗಳು ದಾಖಲಾಗಿರುವ ವಿರಳ ಉದಾಹರಣೆಗಳೂ ಇವೆ. ರಾತ್ರಿ ವೇಳೆ ಹೆದ್ದಾರಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ವ್ಹೀಲಿಗರು, ಕೆಲವೊಮ್ಮೆ ಹಗಲಿನಲ್ಲಿ ಜನನಿಬಿಡ ರಸ್ತೆಗಳಲ್ಲೂ ತಮ್ಮ ಹುಚ್ಚಾಟ ಪ್ರದರ್ಶಿಸುವುದಿದೆ. ವ್ಹೀಲಿ ಮಾಡಿದವರನ್ನು ಬಂಧಿಸಿ ಪ್ರಕರಣಗಳನ್ನು ದಾಖಲಿಸುವ ಹಾಗೂ ಅಪ್ರಾಪ್ತ ವಯಸ್ಸಿನ ಹುಡುಗರ ಪೋಷಕರಿಗೆ ಪೊಲೀಸರು ನೋಟಿಸ್ ಕಳಿಸಿರುವ ಸುದ್ದಿಗಳು ಸಾಮಾನ್ಯ ಎನ್ನುವಂತಾಗಿದೆ. ಜನರ ಬೈಗುಳ ಹಾಗೂ ಪೊಲೀಸರ ಭಯವನ್ನು ನಿರ್ಲಕ್ಷಿಸಿ ರಸ್ತೆಗಳಲ್ಲಿ ನಿರ್ಲಜ್ಜವಾಗಿ ವರ್ತಿಸುವಷ್ಟರ ಮಟ್ಟಿಗೆ ವ್ಹೀಲಿ ವ್ಯಸನವಿದೆ. ಈ ಹುಚ್ಚಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಪೊಲೀಸರು ತೆಗೆದುಕೊಳ್ಳುತ್ತಿರುವ ಕ್ರಮ ಸಾಲದು ಎನ್ನುವ ಅಭಿಪ್ರಾಯಗಳಿವೆ. ಈ ಅಭಿಪ್ರಾಯವನ್ನು ಪುರಸ್ಕರಿಸುವಂತೆ, ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಯುವಕರು ಬೈಕ್ ವ್ಹೀಲಿ ಮಾಡುತ್ತಿದ್ದರೂ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಹೈಕೋರ್ಟ್ ಕಳೆದ ವಾರವಷ್ಟೇ ಅಸಮಾಧಾನ ವ್ಯಕ್ತಪಡಿಸಿದೆ.

ಒಂಬತ್ತು ತಿಂಗಳು ತುಂಬಿದ ಎಲ್ಲ ಮಕ್ಕಳಿಗೂ ಸುರಕ್ಷತಾ ಹೆಲ್ಮೆಟ್ ಹಾಗೂ ಮಕ್ಕಳ ಸುರಕ್ಷತಾ ಸಾಧನಗಳು ಲಭ್ಯವಾಗುವ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎನ್ನುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ, ಹೆಚ್ಚುತ್ತಿರುವ ವ್ಹೀಲಿಂಗ್ ಬಗ್ಗೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಆತಂಕ ವ್ಯಕ್ತಪಡಿಸಿದೆ. ಬೈಕ್ ವ್ಹೀಲಿಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ವ್ಹೀಲಿ ಮಾಡುವವರ ವಿರುದ್ಧ ಪೊಲೀಸರು ಸಮರ್ಪಕ ಕ್ರಮ ಜರುಗಿಸುತ್ತಿಲ್ಲ, ಈ ಬಗ್ಗೆ ಸರ್ಕಾರ ಏನು ಮಾಡುತ್ತಿದೆ ಎಂದು ನ್ಯಾಯಪೀಠ ಪ್ರಶ್ನಿಸಿದೆ; ಬೈಕ್ ವ್ಹೀಲಿ ತಡೆಗೆ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಮೌಖಿಕವಾಗಿ ಸೂಚಿಸಿದೆ.

ವ್ಹೀಲಿ ಮಾಡುವ ಹುಡುಗರು ತಮ್ಮ ಪ್ರಾಣದ ಜೊತೆಗೆ ರಸ್ತೆಯಲ್ಲಿ ಸಂಚರಿಸುವ ಇತರರ ಪ್ರಾಣದ ಜೊತೆಗೂ ಆಟವಾಡುತ್ತಿರುತ್ತಾರೆ. ಇಂಥ ಪುಂಡರಿಗೆ ದಂಡ ವಿಧಿಸುವುದರಿಂದಲೋ, ಮೌಖಿಕ ಎಚ್ಚರಿಕೆ ನೀಡುವುದರಿಂದಲೋ ಹೆಚ್ಚಿನ ಉಪಯೋಗವಿಲ್ಲ. ವ್ಹೀಲಿ ಮಾಡುವವರ ಚಾಲನಾ ಪರವಾನಗಿಯನ್ನು ನಿರ್ದಿಷ್ಟ ಅವಧಿಯವರೆಗೆ ಅಮಾನತ್ತಿನಲ್ಲಿಡಬೇಕು. ಪುಂಡಾಟ ಮುಂದುವರೆಸಿದಲ್ಲಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಜೊತೆಗೆ, ವಾಹನ ಚಾಲನಾ ಪರವಾನಗಿಯನ್ನು ಶಾಶ್ವತವಾಗಿ ರದ್ದುಪಡಿಸಬೇಕು. ಕಠಿಣ ಕ್ರಮಗಳನ್ನು ಕೈಗೊಳ್ಳದೆ ಹೋದರೆ ವ್ಹೀಲಿ ವ್ಯಸನಿಗಳ ದುಂಡಾವರ್ತನೆ ಮುಂದುವರೆಯುತ್ತಲೇ ಇರುತ್ತದೆ.

ವ್ಹೀಲಿ ಹುಚ್ಚನ್ನು ನಿಯಂತ್ರಿಸುವಲ್ಲಿ ಪೋಷಕರ ಪಾತ್ರವೂ ಮುಖ್ಯವಾದುದಾಗಿದೆ. ಅಗತ್ಯವಿಲ್ಲದೆಯೂ ಮಕ್ಕಳಿಗೆ ದ್ವಿಚಕ್ರ ವಾಹನಗಳನ್ನು ಕೊಡಿಸುವ ಪೋಷಕರ ಸಂಖ್ಯೆ ದೊಡ್ಡದಿದೆ. ತೀರಾ ಅಗತ್ಯವೆನಿಸದೆ ಹೋದರೆ ದ್ವಿಚಕ್ರ ವಾಹನಗಳನ್ನು ಮಕ್ಕಳಿಗೆ ಕೊಡಿಸುವುದು ಸಂಪನ್ಮೂಲಗಳ ಅಪವ್ಯಯವಷ್ಟೇ. ಸಾರ್ವಜನಿಕ ಸಾರಿಗೆಗೆ ಒಗ್ಗಿಕೊಳ್ಳುವಂತೆ ಮಕ್ಕಳನ್ನು ಬೆಳೆಸುವುದರಲ್ಲಿ ಕುಟುಂಬಕ್ಕೂ ಲಾಭವಿದೆ, ಸಾರ್ವಜನಿಕ ಹಿತವೂ ಇದೆ.

ಹದಿಹರೆಯದ ಉತ್ಸಾಹ ಹಾಗೂ ಶಕ್ತಿಯನ್ನು ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಯುವಜನರಿಗೆ ಅರಿವು ಮೂಡಿಸುವ ಕೆಲಸ ಮನೆಯೊಳಗೂ ಹೊರಗೂ ನಡೆಯಬೇಕು. ವ್ಹೀಲಿಯಂತಹ ಚಟುವಟಿಕೆಗಳು ಕ್ಷಣಿಕ ಮನರಂಜನೆ ನೀಡಿ, ಜನರ ಗಮನಸೆಳೆದರೂ, ಅಂತಿಮವಾಗಿ ಅವು ಕಾನೂನುಬಾಹಿರ ಕೃತ್ಯಗಳಾಗಿರುತ್ತವೆ ಹಾಗೂ ಅಪಾಯಗಳಿಗೆ ಎಡೆ ಮಾಡಿಕೊಡುತ್ತವೆ.

■ ರಘುನಾಥ ಚ.ಹ.